ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-70/2026-27/46 ದಿನಾಂಕ: 9 JUN 2026

**:: ಸಿಂಡಿಕೇಟ ಸಭೆಯ ನಡಾವಳಿಗಳು ::**

ಕರ್ನಾಟಕ ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಯನ್ನು **ದಿನಾಂಕ 29 ಮೇ, 2026 ರಂದು ಮಧ್ಯಾಹ್ನ 03:00 ಗಂಟೆಗೆ** ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಿಂಡಿಕೇಟ ಸಭೆಗೆ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1) | ಪ್ರೊ. ಐರಾನಿ ಮೊಹಮ್ಮದ್ ಖಾನ್, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2) | ಶ್ರೀ. ಕೇಶವ ಎಚ್., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 3) | ಶ್ರೀ. ಸಂಜಯ ಕಪಟಕರ, ಧಾರವಾಡ | ಸದಸ್ಯರು |
| 4) | ಶ್ರೀ. ಸದಾನಂದ ಚಿಂತಾಮಣಿ, ಕಲಘಟಗಿ | ಸದಸ್ಯರು |
| 5) | ಡಾ.(ಶ್ರೀಮತಿ). ಎನ್. ಸಿ. ಪಾಟೀಲ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| 6) | ಡಾ. ಬಿ. ಬಿ. ಹೊಳಗುಂದಿ, ಪ್ರಾಚಾರ್ಯರು, ಗದಗ | ಸದಸ್ಯರು |
| 7) | ಡಾ. ಬಿ. ಎಲ್. ಗುಂಡೂರ, ಪ್ರಾಚಾರ್ಯರು, ದಾಂಡೇಲಿ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 8) | ಡಾ. ಎಸ್. ವಿ. ವಸ್ತ್ರದ, ಪ್ರಾಚಾರ್ಯರು, ಅಂಕೋಲಾ | ಸದಸ್ಯರು |
| 9) | ಶ್ರೀ. ಮಹೇಶ ವಾಯ್. ಹುಲೆನ್ನವರ, ಧಾರವಾಡ | ಸದಸ್ಯರು |
| 10) | ಶ್ರೀ. ರಾಬರ್ಟ ದದ್ದಾಪುರಿ, ಧಾರವಾಡ | ಸದಸ್ಯರು |
| 11) | ಡಾ. ಬಸವರಾಜ ಗೊರವರ, ಕುಂದಗೋಳ | ಸದಸ್ಯರು |
| 12) | ಡಾ. ಶಿವಾನಂದ ವಿ. ನಾಯಕ, ಅಂಕೋಲಾ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 13) | ಶ್ರೀ. ಶ್ಯಾಮ್ ಮಲ್ಲನಗೌಡರ, ಧಾರವಾಡ | ಸದಸ್ಯರು |
| 14) | ಡಾ. ಎ. ಎಮ್. ಕಡಕೋಳ, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 15) | ಶ್ರೀ. ಪ್ರದೀಪಕುಮಾರ, ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ | ವಿಶೇಷ ಆಹ್ವಾನಿತರು |
| 16) | ಡಾ. ಮೃತ್ಯುಂಜಯ ಎಚ್. ಅಗಡಿ, ಪ್ರಭಾರ ಕುಲಸಚಿವರು (ಆಡಳಿತ) ಮತ್ತು ಡೀನರು ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಸದಸ್ಯರುಗಳು ಇರುವುದನ್ನು ಖಚಿತಪಡಿಸಿಕೊಂಡು ಅಂದರೆ 16 ಜನ ಸದಸ್ಯರುಗಳು (03 ಸದಸ್ಯರು ಆನ್‌ಲೈನ್ ಮತ್ತು 13 ಸದಸ್ಯರು ಖುದ್ದು ಹಾಜರಿರುವುದನ್ನು) ಖಚಿತಪಡಿಸಿಕೊಂಡು ಮಧ್ಯಾಹ್ನ 03:00 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಸಭೆಯ ಅಧ್ಯಕ್ಷರಾದ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

-
-
-
-

ಕುಲಸಚಿವರು ಕುಲಪತಿಗಳು

| | | |
|---|---|---|
| **1)** | ವಿಷಯ | ವಿಶ್ವವಿದ್ಯಾಲಯದ 2025ನೇ ಸಾಲಿನ 76ನೇ ವಾರ್ಷಿಕ ಘಟಿಕೋತ್ಸವವನ್ನು ಜೂನ್ 2026ರಲ್ಲಿ ಆಯೋಜಿಸುವ ಕುರಿತು. |
| **ನಿರ್ಣಯ** | | ವಿಶ್ವವಿದ್ಯಾಲಯದ 2025ನೇ ಸಾಲಿನ 76ನೇ ವಾರ್ಷಿಕ ಘಟಿಕೋತ್ಸವವನ್ನು ಜೂನ್ 2026ರಲ್ಲಿ ಆಯೋಜಿಸುವ ಕುರಿತು ಸಿಂಡಿಕೇಟ್‌ದಲ್ಲಿ ಈ ಕೆಳಗಿನಂತೆ ಚರ್ಚಿಸಲಾಯಿತು.<br><br>೧) ಅಂಕಪಟ್ಟಿಗಳಲ್ಲಿ ಮಹಾವಿದ್ಯಾಲಯಗಳ ಹೆಸರುಗಳನ್ನು ಸರಿಯಾಗಿ ನಮೂದಿಸುವ ಪ್ರಕ್ರಿಯೆ UUCMS ನಲ್ಲಿ ಸರಿಪಡಿಸುವುದು<br><br>೨) ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೇಗನೆ ಘಟಿಕೋತ್ಸವವನ್ನು ಆಯೋಜಿಸಲು ಅಭಿಪ್ರಾಯ ಪಡಲಾಯಿತು.<br><br>೩) ವಿದ್ಯಾರ್ಥಿಗಳಿಗೆ ಕೊಡಮಾಡುವ ಸುವರ್ಣ ಪದಕ ಮತ್ತು ಎಲ್ಲ ಸಿದ್ಧತೆಗಳನ್ನು ಮಾಡಲು ಹೊಸ ಟೆಂಡರ್ ಕರೆಯಲು ಸಮಯದ ಅಭಾವವಿರುವುದರಿಂದ ಹಾಗೂ ಅಂಕಪಟ್ಟಿಯ ತಾಂತ್ರಿಕ ಕಾರಣಗಳಿಂದ 2025 & 2026 ನೇ ಸಾಲಿನ 76 & 77ನೇ ಎರಡು ಘಟಿಕೋತ್ಸವಗಳನ್ನು ಒಂದೇ ಬಾರಿ ಜರುಗಿಸಲು ಕೂಡ ಅಭಿಪ್ರಾಯಪಡಲಾಯಿತು.<br><br>ಕಾರಣ, ವಿದ್ಯಾರ್ಥಿಗಳಿಗೆ 15.06.2026ರ ಒಳಗಾಗಿ ಅಂಕಪಟ್ಟಿಗಳನ್ನು ಸರಿಪಡಿಸಿಕೊಂಡು ತದನಂತರ ಸಿಂಡಿಕೇಟ್‌ನಲ್ಲಿ ಪುನಃ ಚರ್ಚಿಸಲು ನಿರ್ಣಯಿಸಲಾಯಿತು. |
| **2)** | ವಿಷಯ | ಗುಡ್‌ನ್ಯೂಸ್ ವೆಲ್‌ಫೇರ್ ಸೋಸೈಟಿಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ತುಮರಿಕೊಪ್ಪ, ತಾ॥ ಕಲಘಟಗಿ ಇದು ಅತಿಕ್ರಮಣವಾದ ಸ್ಥಳದಲ್ಲಿ ಇರುವುದರಿಂದ ಈ ಮಹಾವಿದ್ಯಾಲಯದ ಸಂಯೋಜನೆಯನ್ನು ರದ್ದುಪಡಿಸಲು ಶ್ರೀ ಗುರುಸಿದ್ದಪ್ಪ ಅ ನಾಶಿ ಅವರು ದೂರು ಸಲ್ಲಿಸಿದ ಕುರಿತು. |
| **ನಿರ್ಣಯ** | | ಗುಡ್‌ನ್ಯೂಸ್ ವೆಲ್‌ಫೇರ್ ಸೋಸೈಟಿಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ತುಮರಿಕೊಪ್ಪ, ತಾ॥ ಕಲಘಟಗಿ ಇದು ಅತಿಕ್ರಮಣವಾದ ಸ್ಥಳದಲ್ಲಿ ಇರುವುದರಿಂದ ಈ ಮಹಾವಿದ್ಯಾಲಯವನ್ನು ಬೇರೆಡೆ ಸ್ಥಳಾಂತರಿಸುವಂತೆ ಹಾಗೂ ಸಂಯೋಜನೆ ರದ್ದುಪಡಿಸಲು ಶ್ರೀ ಗುರುಸಿದ್ದಪ್ಪ ಅ ನಾಶಿ ಅವರು ದೂರು ಸಲ್ಲಿಸಿದ ಕುರಿತಾಗಿ ಸಿಂಡಿಕೇಟ್‌ನಲ್ಲಿ ಈ ವಿಷಯದ ಕುರಿತು ಕಡತವನ್ನು ಪರಿಶೀಲಿಸಲಾಗಿ, ಕಾನೂನು ಅಭಿಪ್ರಾಯದಂತೆ ಈ ಪ್ರಕರಣವು ಮಾನ್ಯ ನ್ಯಾಯಲಯದಲ್ಲಿರುವುದರಿಂದ, ಅಂತಿಮ ತೀರ್ಪು ಬರುವವರೆಗೆ ಯಾವುದೇ ಕ್ರಮ ಜರುಗಿಸಬಾರದೆಂದು ನಿರ್ಣಯಿಸಿತು. |
| **3)** | ವಿಷಯ | ಸ್ನಾತಕ & ಸ್ನಾತಕೋತ್ತರ ಕೋರ್ಸುಗಳ ಶುಲ್ಕಗಳನ್ನು ಹೆಚ್ಚಿಸಿದ ವಿಷಯವನ್ನು ದೃಢೀಕರಿಸುವ ಕುರಿತು. |
| **ನಿರ್ಣಯ** | | ವಿಶ್ವವಿದ್ಯಾಲಯದಲ್ಲಿಯ ಸ್ನಾತಕ & ಸ್ನಾತಕೋತ್ತರ ಕೋರ್ಸುಗಳ ಎಲ್ಲ ಶುಲ್ಕಗಳನ್ನು ಹೆಚ್ಚಿಸುವ ಪ್ರಸ್ತಾವನೆಯ ಕುರಿತು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಅನುಮೋದಿಸಿತು. |



**ಕುಲಸಚಿವರು** **ಕುಲಪತಿಗಳು**

| | | |
|---|---|---|
| **4)** | ವಿಷಯ | ವಿಶ್ವವಿದ್ಯಾಲಯದ ಪರೀಕ್ಷಾ ಎಂ.ಪಿ.ಸಿ. ಪ್ರಕರಣಗಳಿಗೆ ಸಂಬಂಧಿಸಿದ ವಿನಿಯಮಗಳನ್ನು ತಿದ್ದುಪಡಿ ಮಾಡುವ ಕುರಿತು. |
| **ನಿರ್ಣಯ** | | ವಿಶ್ವವಿದ್ಯಾಲಯದ ಪರೀಕ್ಷೆಗೆ ಸಂಬಂಧಿಸಿದ ಎಂ.ಪಿ.ಸಿ. ಪ್ರಕರಣಗಳಿಗೆ ಸಂಬಂಧಿಸಿದ ವಿನಿಯಮಗಳನ್ನು ತಿದ್ದುಪಡಿ ಮಾಡಲು ನಿರ್ಣಯಿಸಿತು. ಮುಂದುವರೆದು, ಸದರಿ ವಿನಿಯಮಗಳನ್ನು ತಿದ್ದುಪಡಿ ಮಾಡಲು ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. ಮುಂದುವರೆದು, ಸದರಿ ವಿನಿಯಮಗಳನ್ನು ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳ ಮುಂದೆ ಮಂಡಿಸಿ, ಸರ್ಕಾರದ ಅನುಮೋದನೆ ಪಡೆಯಲು ತೀರ್ಮಾನಿಸಿತು. |
| **5)** | ವಿಷಯ | ಕವಿವಿಯ ಪಬ್ಲಿಕ್ ಶಾಲೆ & ಪ್ರಾಥಮಿಕ ಶಾಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ. |
| **ನಿರ್ಣಯ** | | ಕವಿವಿಯ ಪಬ್ಲಿಕ್ ಶಾಲೆ & ಪ್ರಾಥಮಿಕ ಶಾಲೆಯಲ್ಲಿಯ ಖಾಲಿ ಇರುವ ಹುದ್ದೆಗಳಿಗೆ ಸರ್ಕಾರದ ಪತ್ರ ಸಂಖ್ಯೆ ಇಡಿ 11 ಯುಕೆವಿ 2021 ದಿನಾಂಕ 11.04.2022ರಂತೆ ಶಿಕ್ಷಕರ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ಬಗ್ಗೆ, ಹಾಗೂ ಕೆಲವು ಸಂಘಟನೆಗಳ ಮನವಿಗಳ ಕುರಿತು ಸರ್ಕಾರದಿಂದ ಮಾರ್ಗದರ್ಶನ ಕೋರಲಾಗಿತ್ತು. ಸರ್ಕಾರವು ದಿನಾಂಕ 19.05.2026ರ ಪತ್ರದನ್ವಯ ನೇಮಕಾತಿ ಪ್ರಕ್ರಿಯೆಯನ್ನು ಪರ್ಣಗೊಳಿಸಲು ಅನುಮತಿ ನೀಡಿರುತ್ತದೆ. ಸದರ ಪತ್ರದ ಪ್ರಕಾರ ನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರದ ಕಾಯಿದೆ, ನಿಯಮಗಳು ಮಾರ್ಗಸೂಚಿಗಳನ್ನು ಗಮನದಲ್ಲಿರಿಸಿ ಹಾಗೂ ವಿಶ್ವವಿದ್ಯಾಲಯದ ಪರಿನಿಯಮಗಳನ್ವಯ ಪರಿಶೀಲಿಸಿ ಈ ನೇರ ನೇಮಕಾತಿಗೆ ಪ್ರಕ್ರಿಯೆಗೆ ಸಂಬಂಧಿಸಿದ ಮನವಿಗಳಿಗೆ ನಿಯಮಾನುಸಾರ ಹಿಂಬರಹ ನೀಡಿ ಪ್ರಸ್ತಾಪಿತ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ನಿರ್ಣಯಿಸಿತು. ಮುಂದುವರೆದು, ಸದರಿ ಅಭ್ಯರ್ಥಿಗಳ ಆನ್‌ಲೈನ್ ಸಿಂಧುತ್ವ ಹಾಗೂ ಮತ್ತಿತರೇ ದಾಖಲೆಗಳನ್ನು ಪರಿಶೀಲನೆಗೊಳಪಡಿಸಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ತೀರ್ಮಾನಿಸಲಾಯಿತು. |

**ಕುಲಸಚಿವರು**

**ಕುಲಪತಿಗಳು**